# ಬಹೂಪಯೋಗಿ ಕ್ಯಾನ

■ ಪದ್ಮಜಾ ಸುಂದರೇಶ್

ಕ್ಯಾನ ಒಂದು ಜನಪ್ರಿಯ ಉದ್ಯಾನಸಸ್ಯ. ಪಾರ್ಕ್, ಮನೆಯ ಮುಂದಿನ ತೋಟ, ಸಾರ್ವಜನಿಕ ಕಟ್ಟಡಗಳ ಮುಂದೆ ಅಲಂಕಾರಿಕ ಸಸ್ಯವಾಗಿ ಇದನ್ನು ಬೆಳೆಸುತ್ತಾರೆ. ದಕ್ಷಿಣ ಮತ್ತು ಮಧ್ಯೆ ಅಮೆರಿಕ, ವೆಸ್ಟ್ ಇಂಡೀಸ್, ಮೆಕ್ಸಿಕೋ, ಯೂರೋಪಿನ ಬಹುಭಾಗ ಮತ್ತು ಆಗ್ನೇಯ ಏಷ್ಯಾ ಪ್ರದೇಶಗಳು ಇದರ ತವರು ಎನ್ನಬಹುದು. ಪುಷ್ಪೋದ್ಯಮದ ಪ್ರಮುಖ ಬೆಳೆಯಾಗಿರುವ ಇದನ್ನು ಭಾರತ ಸಹಿತ ಈಗ ಬಹುತೇಕ ದೇಶಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಬೆಳೆಸುತ್ತಾರೆ.

ಕ್ಯಾನೇಸೀ ಕುಟುಂಬಕ್ಕೆ ಸೇರಿದ ಕ್ಯಾನ, ಬಹುವಾರ್ಷಿಕ ಸಸ್ಯ. ಒಟ್ಟು 19 ಪ್ರಬೇಧಗಳನ್ನು ಹೊಂದಿದೆ. ಅರ್ಧ ಅಡಿಯಿಂದ ಹಿಡಿದು ಆರು ಅಡಿಗಳವರೆಗೂ ಬೆಳೆಯುವ ಪ್ರಬೇಧಗಳಿವೆ. ಇದರಲ್ಲಿ ಆಕರ್ಷಕ ಕೆಂಪು, ಕಿತ್ತಳೆ ಹಾಗೂ ಹಳದಿ ಬಣ್ಣದ ಹೂವುಗಳಿವೆ. ಎಲೆಗಳೂ ಅಷ್ಟೇ ಆಕರ್ಷಕ. ಹಸಿರು, ಕಂದು ಅಥವಾ ತಾಮ್ರದ ಬಣ್ಣಗಳಲ್ಲಿ ಇರುತ್ತವೆ. ಬಾಳೆ ಎಲೆಯನ್ನು ಹೋಲುತ್ತವೆ. ಸಸ್ಯದ ಬೀಜಗಳಿಂದ ಅಥವಾ ಗೆಡ್ಡೆಗಳಿಂದ ಹೊಸ ಸಸ್ಯವನ್ನು ಪಡೆಯಬಹುದು.

ಕ್ಯಾನ ಸಸ್ಯದ ಬಹುತೇಕ ಎಲ್ಲ ಭಾಗಗಳೂ ಉಪಯುಕ್ತವಾಗಿವೆ. ಉಪಯೋಗಗಳನ್ನು ಹೀಗೆ ಪಟ್ಟಿ ಮಾಡಬಹುದು:

★ ಕಾಂಡದ ಬುಡದಲ್ಲಿರುವ ಗೆಡ್ಡೆಯಲ್ಲಿ (ರೈಜೋಮ್) ಪಿಷ್ಟವು ಅಧಿಕ ಪ್ರಮಾಣದಲ್ಲಿ ಸಂಗ್ರಹವಾಗಿದ್ದು ಅದನ್ನು ಆಹಾರವಾಗಿ ಬಳಸುತ್ತಾರೆ.
★ ಎಳೆಯ ಕಾಂಡ ಮತ್ತು ಎಲೆಗಳೂ ಆಹಾರವಾಗಿ ಉಪಯುಕ್ತ. ಅಲ್ಲದೆ ಅವು ಬಲಿತಾಗ ಜಾನುವಾರುಗಳ ಮೇವು ಆಗಿ ಬಳಕೆಯಾಗುತ್ತದೆ.
★ ಎಲೆಗಳಿಂದ ಕಾಗದವನ್ನು ತಯಾರಿಸುತ್ತಾರೆ.
★ ಕಾಂಡದಿಂದ ನಾರನ್ನು ಉತ್ಪಾದಿಸಿ, ಸೆಣಬಿನ ನಾರಿಗೆ ಬದಲಿಯಾಗಿ ಉಪಯೋಗಿಸುತ್ತಾರೆ.
★ ಬೀಜಗಳನ್ನು ಆಭರಣಗಳಲ್ಲಿ ಬಳಸುತ್ತಾರೆ.
★ ಎಲೆಗಳನ್ನು ಸುಟ್ಟಾಗ ಉಂಟಾಗುವ ಹೊಗೆಯು ಕ್ರಿಮಿ ಕೀಟಗಳನ್ನು ದೂರವಿರಿಸುತ್ತದೆ. ●





